IJHA
Indian Journal of History and Archaeology

Indian Journal of History and Archaeology

ISSN (E): 2582-225X
Vol-1 Issue 1, May-June 2019. 29-37



# ಮಲ್ಲೈ ಮಹದೇಶ್ವರ ಬೆಟ್ಟದ ಬೇಡಗಂಪನ ಆಚರಣೆ ಮತ್ತು ಸಂಪ್ರದಾಯಗಳು : ಒಂದು ವೀಕ್ಷಣೆ

**ಶ್ರೀ ಪುರುಷೋತ್ತಮ**

**ಶ್ರೀ ಪುರುಷೋತ್ತಮ**
ಪಿಹೆಚ್.ಡಿ ಸಂಶೋಧನಾರ್ಥಿ
ಜಾನಪದ ಸಾಹಿತ್ಯ ವಿಭಾಗ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ, ಶಿಗ್ಗಾವಿ ತಾಲ್ಲೂಕು,
ಹಾವೇರಿ ಜಿಲ್ಲೆ
ಮೊ: 9900745366
ಇ-ಮೇಲ್:purushothamaagasarahalli@gmail.com

ಮಾನವ ನಿಸರ್ಗದೊಂದಿಗೆ ಜೀವನ ಆರಂಭಿಸಿದಾಗ ಅವನ ಬದುಕಿಗೆ ಎರಡು ಬಗೆಯ ವೃತ್ತಿಗಳನ್ನು ಕೈಗೊಂಡನು. ಮೊದಲನೆಯದು, ಕಾಡಿನಲ್ಲಿ ಗೆಡ್ಡೆ-ಗೆಣಸು ಅಗೆಯುವುದು ಮತ್ತು ಎರಡನೆಯದು, ಕಾಡು ಪ್ರಾಣಿಗಳನ್ನು ಬೇಟೆಯಾಡುವುದು, ಆಹಾರ ಸಂಗ್ರಹಣೆ. ಈ ಎರಡು ವೃತ್ತಿಗಳು ಅವನಿಗೆ ಬಂಡವಾಳದ ಮೂಲವಾಗಿದ್ದವು. ವ್ಯವಸಾಯ ವಿಧಾನವನ್ನು ತಿಳಿಯುವ ಮುನ್ನ ಮಾನವ ಹಣ್ಣು-ಹಂಪಲುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದನು. ಇಂದಿಗೂ ಕೆಲವು ಬೇಡರು ಗಿರಿ-ಪರ್ವತ, ಅರಣ್ಯ ಪ್ರದೇಶದಲ್ಲಿ ಈ ವಿಧಾನವನ್ನು ಅನುಸರಿಸುತ್ತಾರೆ. ಹಣ್ಣು-ಹಂಪಲು, ಗೆಡ್ಡೆ-ಗೆಣಸು ಎಲ್ಲಾ ಋತುಮಾನಗಳಲ್ಲಿ ದೊರೆಯಲಾರದ ನಿರ್ದಿಷ್ಟವಾದ ಋತುಮಾನದಲ್ಲಿ ಅಲೆದಾಡಿ ಆಹಾರಕ್ಕಾಗಿ ರುಚಿ ಬದಲಾವಣೆಯಿಂದ ಬೇಟೆಯನ್ನು ಒಂದು ವೃತ್ತಿ ಮಾಡಿಕೊಳ್ಳಬೇಕಾದ ಅನಿವಾರ್ಯ ಸ್ಥಿತಿ ಬಂದಿರಬೇಕು. ಕಾಡಿನ ಗೆಡ್ಡೆ-ಗೆಣಸುಗಳನ್ನು ಕಡಿಯಲು ಉಪಯೋಗಿಸುವಲ್ಲಿನ ಬಳಸುವ ಕಲ್ಲಿನ ಆಯುಧಗಳು, ಅಲ್ಪಸ್ವಲ್ಪ ವಿಕಾಸ ಹೊಂದಿ ಕಾಡುಪ್ರಾಣಿಗಳನ್ನು ಕೊಲ್ಲುವ ಆಯುಧಗಳ ಶೋಧನೆಯಲ್ಲಿ ಬಳುಕಾಡುವ ಮರದ ಸೆಬ್ಬೆಗೆ ದಾರವನ್ನು ಕಟ್ಟುವುದರ ಮೂಲಕ ಬಿಲ್ಲನ್ನು ಮಾಡಿಕೊಳ್ಳುವ ಮೂಲ ತತ್ವ ಹೊಳೆಯಿತು. ಅದೇ ಬಿಲ್ಲನ್ನು ಬಳಸುವಲ್ಲಿ ಹೊಸ ಪ್ರಯತ್ನ ಮಾಡಿಕೊಂಡು ಅದರಿಂದ ಕಾಡುಪ್ರಾಣಿಗಳನ್ನು ಗುರಿ ಇಟ್ಟು ಹೊಡೆಯುವ ತಂತ್ರ ಕಲಿತು, ಹೀಗೆ ಬೇಟೆ ಆಯುಧಗಳ ಅನ್ವೇಷಣೆ ಮುಂದುವರೆಯಿತು. ಯಾವ ಪ್ರಾಣಿ ಬಿಲ್ಲಿನ ಬಾಣಕ್ಕೆ ನಾಟುವುದಿಲ್ಲವೊ ಅಂತಹ ಪ್ರಾಣಿಗೆ ಕಲ್ಲಿನ

ಆಯುಧಗಳನ್ನು ಬಳಸಿ ಜತೆಗೆ ಮರದ ಸಲಕರಣೆಗಳ ಮೂಲಕ ಭರ್ಚಿ, ಈಟಿ, ಗಂಡುಗೊಡಲಿ, ಕಂಢ್ಲಿ, ತುರಾಯಿ ಮುಂತಾದ ಆಯುಧಗಳನ್ನು ಬಳಸಿದರು.

ಕಾಲ ಬದಲಾದಂತೆ ಮಾನವ ಬೇಟೆ ಜೊತೆಗೆ ಭೂ ಕೃಷಿ ಮಾಡುವುದು ಕಲಿತ, ಆರಂಭದಲ್ಲಿ ಆದಿವಾಸಿಗಳು ಭೂ ವ್ಯವಸಾಯವನ್ನು ಕೆತ್ಲು ಬೇಸಾಯದಿಂದ ಆರಂಭಿಸಿ, ಉಳಿಮೆಗಾಗಿ ಪಶುಪಾಲನೆಗಳನ್ನು ಉಪಯೋಸಿಗಿಸಿಕೊಂಡರು, ಪಶುಪಾಲನೆ ಮಾಡುತ್ತಾ ಕಾಡು ಮತ್ತು ಸಾಕು ಪ್ರಾಣಿಗಳನ್ನು ಹಿಡಿದು ಮನೆಗೆಲಸಕ್ಕಾಗಿ ಉಪಯೋಗಿಸಿಕೊಂಡರು. ಇಲ್ಲಿ ಕಾಡಿಗೂ ನಾಡಿಗೂ ಅವಿನಾಭಾವ ಸಂಬಂಧ ಬೆಳೆಯಿತು. ಹಸು, ಎತ್ತು, ಕತ್ತೆ, ಉದುರೆಗಳನ್ನು ಕೆಲಸಕ್ಕಾಗಿ, ಊರುಹಂದಿ, ಕುರಿ, ಕೋಳಿ, ಆಡು, ಇತರೆ ಪ್ರಾಣಿಗಳನ್ನು ಆಹಾರಕ್ಕಾಗಿ ಸಾಕಿಕೊಳ್ಳುತ್ತಾ ತನ್ನ ಮನೆ ಕಾಯಲು ನಾಯಿಯನ್ನು ಸಾಕಿ, ಬೇಟೆಗಾಗಿಯೂ ಬಳಸಿಕೊಳ್ಳುತ್ತಿದ್ದರು. ಆದ್ದರಿಂದ ಇದನ್ನು ಬೇಟೆ ನಾಯಿಯೆಂದು ಕರೆಯಲಾಗುತ್ತಿತ್ತು. ಇದರಿಂದ ಬೇಟೆಗಾರನಿಗೆ ಬೇಟೆಯ ಶೋಧನಕ್ಕೆ ಅನುಕೂಲವಾಯಿತು. ಭಾರತದಲ್ಲಿ ಮಧ್ಯಶಿಲಾಯುಗದಿಂದ ನಾಯಿಯ ಉಲ್ಲೇಖವಿದೆ. ಬ್ರಿಟಿಷರ ಪೂರ್ವದಲ್ಲಿ ಇವು ಸಕ್ರಿಯವಾಗಿ ಬೇಟೆಯಲ್ಲಿ ತೊಡಗಿದ್ದವು. ಕರ್ನಾಟಕದಲ್ಲಿ ಇಂದಿಗೂ ಮುಧೋಳನಾಯಿಗಳೆಂದು ಇವು ಪ್ರಸಿದ್ಧಿಯಾಗಿವೆ. ಇಂದು ಕಳ್ಳರನ್ನು ಹಿಡಿಯಲು ಈ ನಾಯಿಗಳನ್ನು ಬಳಸುತ್ತಾರೆ. ಇದರ ಬಗ್ಗೆ ಮುಧೋಳ ರಾಜರು, ಮೊಳೋಜಿರಾವ್ ವೆಂಕಟರಾವ್ ಘೋರ್ಪಡೆ ಮತ್ತು ಭೈರವಸಿಂಗ್ ಮಹಾರಾಜರು ಆಸಕ್ತಿವಹಿಸಿದರು. ಮನುಷ್ಯ ತನ್ನ ಸಂತತಿಯನ್ನು ಹಿಂಸಿಸುವ ಕ್ರೂರ ಮೃಗಗಳನ್ನು ಕೊಲ್ಲಲು ನಾಯಿಗಳ ಮೂಲಕ ಸನ್ನದನಾದನು. ನಾನಾ ಕಾರಣಗಳಿಗಾಗಿ ಮಾನವನಿಗೆ ಬೇಟೆನಾಯಿಗಳು ಸಹಕಾರಿಯಾಗಿದ್ದವು.

ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ನಾವು ಹಲವು ಬುಡಕಟ್ಟುಗಳಿರುವ ವಾಸದ ನೆಲೆಗಳನ್ನು ಕಾಣುತ್ತೇವೆ. ಅವುಗಳು ವಿಶಿಷ್ಟವಾಗಿದ್ದು, ಪ್ರಾಕೃತಿಕವಾಗಿ ಪಶ್ಚಿಮ ಘಟ್ಟಗಳು ಸಹ ಮಹತ್ವ ಪಡೆದಿದೆ. ಇಲ್ಲಿ ಅಲೆಮಾರಿಗಳ ಗುಂಪಿಗೆ ಸೇರಿದ ಹಕ್ಕಿ–ಪಿಕ್ಕಿ ಜನರು ಇಂದಿಗೂ ಅ  ಅಳಿಲನ್ನು ಹಿಡಿದು ತಿನ್ನುತ್ತಾರೆ. ಅದನ್ನು ಬೇಟೆಯಾಡುವ ತಂತ್ರವೂ ಅತೀ ಜಾಣ್ಮೆಯಿಂದ ಕೂಡಿದೆ. ಅಳಿಲು ಏರಿರುವ ಮರದ ಸುತ್ತ ಬಲೆಯನ್ನು ಒಡ್ಡುತ್ತಾರೆ. ಅಳಿಲಿಗೆ ಕಾಣಿಸದಂತೆ ಒಬ್ಬರು ಮರದಡಿಯಲ್ಲಿ ನಿಂತು ಅಳಿಲಿನಂತೆ ಶಬ್ಧಮಾಡುತ್ತಾರೆ. ಮೇಲಿರುವ ಅಳಿಲು ತನ್ನ ಸಂಗಾತಿಯ ಶಬ್ಧವಿರಬಹುದೆಂದು ಆಲಿಸಿ ಕೆಳಗಿಳಿದು ಬಂದು ಬಲೆಗೆ ಬಿದ್ದು, ಬೇಟೆಗಾರನ ವಶಕ್ಕೆ ಸುಲಭವಾಗಿ ಬೀಳುತ್ತದೆ. ಇವರು ಅಳಿಲನ್ನು ಚಾಟಿಯ ಬಿಲ್ಲಿನಿಂದಲೂ ಹೊಡೆಯವರು, ಪಶ್ಚಿಮಘಟ್ಟಗಳಲ್ಲಿ ವಿಶೇಷವಾಗಿ ಬಿಳಿಗಿರಿರಂಗನಬೆಟ್ಟದ ಸೋಲಿಗರು ಬೇಟೆಗೆ ನಾನಾ ತರದ ತಂತ್ರಗಳನ್ನು ಪ್ರಯೋಗಿಸುತ್ತಾ ಕಾಡುಕೋಳಿಗಳನ್ನು ಬೀಳಿಸಿಕೊಳ್ಳಲು ಪಿಟರಿಗೂಳವೆಯನ್ನು (ಕೊಳಲು) ಬಳಸುತ್ತಾರೆ. ಪಿಟರಿಗೊಳೆ (ಪಿಳ್ಳಂಗೊವೆ) ಬಿದಿರಿನ ಕೊಳವೆಯಾಗಿದ್ದು, ಇದರೊಳಕ್ಕೆ ಸಿರುಹೊನ್ನೆಕಾಯಿ ಹಾಕಿ ಗುರಿಯಿಟ್ಟು ಕಾಡುಕೋಳಿಗೆ ಹೊಡೆದು ಬೀಳಿಸುತ್ತಾರೆ. ಇದು ಇಂದಿಗೂ ಪ್ರದರ್ಶನ ರೂಪದಲ್ಲಿದೆ. ಈ ಸೋಲಿಗರು ಕಾಡುಕೋಳಿಯ ಬೇಟೆಗೆ ಮತ್ತೊಂದು ತಾಂತ್ರಿಕ ವಿಧಾನ ಬಳಸುತ್ತಾರೆ. ಅಡ್ಡಡ ಪಾಜಿಯನ್ನು ಒಡ್ಡುವುದು, ಇದು ಬಿದಿರಿನ ಕಡ್ಡಿಗಳಿಂದ ಮಾಡಿದ ಸುಮಾರು ಅರ್ಧ ಅಡಿಯಿಂದ ಹೆಣೆದಿರುವ ಒಂದು ಬೇಟೆಯ ಉಪಕರಣ, ಇದರಲ್ಲಿ ಕಿಟಕಿಯ ಆಕಾರಕ್ಕೆ ಬಿದಿರುಕಡ್ಡಿಗಳನ್ನು ಜೋಡಿಸಿರುತ್ತಾರೆ. ಈ ಕಟ್ಟಿಗೆಗಳ ಮಾಲೆಯನ್ನು ಬೆಣೆಯಿಂದ ಒಂದಕ್ಕೊಂದು ಸೇರಿಸುತ್ತಾರೆ. ಇದರೊಳಗೆ ಚೌಕಕಾರವಾಗಿ ದಾರವನ್ನು ಬಿಗಿದು, ಅದರೊಳಕ್ಕೆ ಉರುಲು ಜೋಡಿಸುತ್ತಾರೆ. ಈ ಬಗೆಯ ನಾಲ್ಕು ಪಾಜಿಗಳನ್ನು ಮಾಡಿಕೊಳ್ಳುವರು, ತರುವಾಯ

ಬೇಟೆಗೆ ಸಿದ್ಧರಾಗುತ್ತಾರೆ. ಮೊದಲಿಗೆ ಕೋಲಿ ಎಲ್ಲದೆ ಎಂಬುದನ್ನು ಪತ್ತೆಮಾಡಿ, ಆ ಸ್ಥಳಕ್ಕೆ ಹೋಗಿ ಒಂದು ಸಮತಟ್ಟಾದ ನೆಲದಲ್ಲಿ 4 ಮೂಲೆಗೆ 4 ರೀತಿಯ ಪಾಜಿಗಳನ್ನು ಒಡ್ಡುವರು. ಹಿರಿಯರಾದ ಒಬ್ಬರು, ಅನುಭವಸ್ಥ ಬೇಟೆಗಾರ 4 ಪಾಜಿಗಳ ಮಧ್ಯ ಕುಳಿತಿರುತ್ತಾರೆ. ಕೆಲವರು ಅವನ ಮೇಲೆ ಸೊಪ್ಪನ್ನು ಮುಚ್ಚಿ ಮರೆ ಮಾಡುತ್ತಾರೆ. ಉಳಿದವರು ಮರೆಯಾಗಿ ಅಡಗಿಕೊಳ್ಳುತ್ತಾರೆ. ಮರೆಯಾಗಿರುವ ವ್ಯಕ್ತಿ ಕಾಡುಕೋಳಿಯಂತೆ ತನ್ನ ಗೆಣೆಕಾರನೋ, ಗಣಕಾತಿಯಾಗಿರಬೇಕೆಂದು ಭ್ರಮಿಸಿ ಕೆಳಗಿಳಿದು ಪಾಜಿಯನ್ನು ಒಡ್ಡಿರುವ ಕಡೆಗೆ ಬರುತ್ತದೆ. ಪಾಜಿ ಹತ್ತಿರ ಬರುವಲ್ಲಿ ಉರುಳಿಗೆ ಸಿಕ್ಕಿ ಬೀಳುತ್ತದೆ. ಅದು ಉರುಳಿನಿಂದ ಕತ್ತು ಬಿಗಿದುಕೊಂಡಿರುತ್ತದೆ. ಹೀಗಾಗಿ ತಪ್ಪಿಸಿಕೊಳ್ಳಲು ಅವಕಾಶವಿರುವುದಿಲ್ಲ. ಸೊಡ್ಡಿನೊಳಗೆ ವ್ಯಕ್ತಿ ನಿಶಬ್ಧವಾಗಿ ವರ್ತಿಸುತ್ತಾನೆ. ಇಲ್ಲದಿದ್ದರೆ ಸೋಲು ಖಂಡಿತ

ಸೋಲಿಗರು ಸಾರಂಗ, ಜಿಂಕೆ, ಕಡಬೆ, ಮೊಲ, ಮೂಂತಾದ ಪ್ರಾಣಿಗಳನ್ನು ಬೇಟೆಯಾಡಿ ತಿನ್ನುತ್ತಾರೆ. ಪ್ರಾಣಿಗಳನ್ನು ಕೊಲ್ಲಲು ಅವರು ಅನೇಕ ತಂತ್ರಗಳನ್ನು ಬಳಸುತ್ತಾರೆ. ಈ ಪ್ರಾಣಿಗಳು ಆಹಾರ ಹುಡುಕಿಕೊಂಡು ಅಲೆಯುವ ದಾರಿಯನ್ನು ಬೇಟೆಗಾರ ಬಹುಜಾಗರೂಕನಾಗಿ ನೋಡಿ ಗುರುತಿಟ್ಟುಕೊಂಡಿರುತ್ತಾನೆ. ಈ ಪ್ರಾಣಿಗಳು ಗುಂಪಾಗಿ ಬರುವ ಆ ದಾರಿಯಲ್ಲಿ ಮದ್ದನ್ನು ಇಡುತ್ತಾರೆ. ಈ ಮದ್ದನ್ನು ಗುಂಪಿನ ಮಧ್ಯದ ಒಂದೆರಡು ಜಿಂಕೆಗಳು ತುಳಿದಾಗ ಮದ್ದು ಸಿಡಿದು ನೆಲಕ್ಕುರುಳಿ ಬೇಟೆಗಾರನ ಆಹಾರವಾಗುತ್ತವೆ. ಬೇಡರ ಆಹಾರದ ಅಲೆದಾಟದಲ್ಲಿ ಕಂಡುಕೊಂಡ ನಾನಾ ತರದ ಪ್ರಾಣಿ ಬೇಟೆಯನ್ನು ಇದು ಸಂಕೇತಿಸಿರುತ್ತದೆ.

ಬೇಟೆಗಾರರು ಪ್ರಾಣಿಗಳನ್ನು ಕೊಲ್ಲವಲ್ಲಿ ಅನೇಕ ಉಪಯೋಗಗಳನ್ನು ಅನುಸರಿಸುತ್ತಾರೆ. ದಟ್ಟವಾಗಿ ಪ್ರಾಣಿಗಳು ಅಲೆಯುವ ದಾರಿಯಲ್ಲಿ ಸುಮಾರು 10 ಅಡಿ ಆಳಕ್ಕೆ ಖೆಡ್ಡದಂತಹ ಗುಂಡಿಯೊಂದನ್ನು ತೆಗೆದು ಅದರೊಳಗೆ ಹರಿತವಾದ ಹಲಗನ್ನುಳ್ಳ 3 ದಸಿಗಳನ್ನು ಬಿಗಿಯಾಗಿ ನೆಟ್ಟಿರುತ್ತಾರೆ. ಮೇವಿಗಾಗಿ ಧಾವಿಸಿದ ಪ್ರಾಣಿಗುಂಡಿಯ ಮೇಲ್ಭಾಗದ ಮೇಲೆ ಸೊಪ್ಪಿನ ಛಾವಣಿ ಹಾಕಿ ತೆಳ್ಳಗೆ ಮುಚ್ಚಿರುವುದರಿಂದ ಅದನ್ನು ಮಟ್ಟಸವಾದ ನೆಲವೇಇದ್ದಿರಬಹುದೆಂದು ಭ್ರಮಿಸಿ ಕಾಲಿಟ್ಟಾಗ ನೆಲ ಕುಸಿದು ಗುಂಡಿಯೊಳಕ್ಕೆ ಬಿದ್ದು ದಸಿಯೊಳಗೆ ಸಿಕ್ಕಿಕೊಳ್ಳುತ್ತದೆ.

ಬೇಟೆ ಭೌಗೋಳಿಕವಾಗಿ ಭಿನ್ನ ನೆಲೆಯಲ್ಲಿ ನಿಲ್ಲುತ್ತದೆ. ಒಟ್ಟಾರೆ ಪ್ರಾಣಿಗಳನ್ನು ಹತೋಟಿಯಲ್ಲಿಡುವುದು, ಹಾಗು ಆಹಾರ ಉತ್ಪಾದನೆಯನ್ನು ಮಾಡಿಕೊಳ್ಳುವುದು, ಅನಂತರ ಸಹಜವಾದ ಹವ್ಯಾಸ ಬಯಕೆಗಳನ್ನು ತೀರಿಸಿಕೊಳ್ಳುವುದೇ ಬೇಟೆಯ ಲಕ್ಷಣಗಳಾಗಿವೆ. ಅಲೆಮಾರಿ ಜನಾಂಗಗಳು ಮಾತ್ರ ದಿನನಿತ್ಯ ಬೇಟೆಗಾರರು, ಕೊರಚ, ಗೋಸಾ, ಜಂಗಾಲೆ ಬುಡಬುಡುಕಿ, ಕಿನ್ನರಿಜೋಗಿ, ಮೊದಲಾದವರು ಅಳಿಲು, ಪಕ್ಷಿ, ಇಲಿ, ಮೀನು, ಇತರೆ ಪ್ರಾಣಿ– ಪಕ್ಷಿಗಳನ್ನು ಬೇಟೆಯಾಡುವುದು ಕಂಡುಬರುತ್ತದೆ. ಸೋಲಿಗರು ಬೇಟೆಯ ಸಂದರ್ಭದಲ್ಲಿ ಉಂಟಾಗುವ ಅಪಶಕುನಗಳಿಗೆ ಹೆಚ್ಚಿನ ಆದ್ಯತೆ ಕೊಡುತ್ತಾರೆ. ಬೇಟೆಗೆ ಹೊರಡುವ ಮುಂಚೆ ದೇವರ ಪೂಜೆ ಮಾಡುವರು. ಜೇನು ಕುಯ್ಯಲು ಮರ ಹತ್ತಬೇಕಾಗಿ ಬಂದಾಗ ಮೊದಲು ಮರಕ್ಕೆ ಶರಣುಮಾಡಿಕೊಂಡು ಅನಂತರ ಮರವನ್ನು ಎರುತ್ತಾರೆ. ಬೇಟೆಗೆ ಹೊರಡುವ ದಿನದ ರಾತ್ರಿ ಕನಸಿನಲ್ಲಿ ಅವರು ಹಿರಿಯರೊಂದಿಗೆ ಹೊಗೆಸೊಪ್ಪು, ಹುಣಸೆ ಹಣ್ಣು, ರಾಗಿ, ಮುಂತಾದ ಪದಾರ್ಥಗಳು ಕಾಣಿಸಿಕೊಂಡರೆ ಬೇಟೆ ದೊರೆಯುತ್ತದೆ ಎಂದು ಗಾಢವಾಗಿ ನಂಬುತ್ತಾರೆ. ಬೇಟೆಗೆ ಹೊರಡುವಾಗ ಸೌದೆ ಹೊತ್ತ ವ್ಯಕ್ತಿ ಎದುರಾದರೆ

ಆಗುವುದಿಲ್ಲವೆಂಬ ಸೂಚನೆ ಅವರಿಗಿರುತ್ತದೆ. ವರ್ಷದ ಎಲ್ಲಾ ಕಾಲದಲ್ಲಿಯೂ ಬೇಟೆಯೂಡಿದರೂ ಹಲವಾರು ಪದ್ಧತಿಗಳಿದ್ದು ಕೆಲವು ಮರೆಯಾಗಿವೆ. ಹಬ್ಬ, ಹಿಂದಿನಗಳಲ್ಲಿ ಬೇಟೆಗೆ ಹೋಗುವ ರೂಢಿ ಮಾತ್ರ ಉಳಿದುಕೊಂಡಿರುವುದನ್ನು ಇವರಂತೆಯೇ ಇತರ ಸಮೂದಾಯಗಳಲ್ಲಿ ಕಾಣಬಹುದು. ಕರಾವಳಿಯಲ್ಲಿ ಮೀನುಗಾರಿಕೆ, ಕೊಡಗು ಇತರ ಘಟ್ಟ ಪ್ರದೇಶದಲ್ಲಿ ಹುಲಿ ಬೇಟೆ, ಬಯಲುಸೀಮೆಯಲ್ಲಿ ಜಿಂಕೆ, ಹಂದಿ, ಮೊಲಗಳನ್ನು ಬೇಟೆಯಾಡುವುದು ವಿಶೇಷ.

ಮಧ್ಯಕರ್ನಾಟಕದ ದಾವಣಗೆರೆ, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಬೇಟೆಯ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಗುರುತಿಸಬಹುದು. ಇಲ್ಲಿ ಪ್ರಚಲಿತವಿರುವ ಬೇಟೆ ಹೆಚ್ಚಾಗಿ ಬೇಡರಿಗೆ ಮಾತ್ರ ಮೀಸಲು, ಅವರು ಹಬ್ಬ, ಹರಿದಿನಗಳಲ್ಲಿದೆ. ಕೆಲವು ಸಂದರ್ಭಗಳಲ್ಲಿ ಪ್ರತಿನಿತ್ಯ ಬೇಟೆಗೆ ಹೋಗುವ ಪರಿ ಸೋಜಿಗವಾದುದು, ಕರ್ನಾಟಕದಲ್ಲಿಂದು ಪ್ರಾಣಿಗಳನ್ನು ಬೇಟೆಯಾಡುವುದನ್ನು ಈ ಕೆಳಕಂಡಂತೆ ನೋಡಬಹುದು.

1.ಉಡದ ಬೇಟೆ 2.ಚಿಗರೆಬೇಟೆ 3.ಮೊಲದ ಬೇಟೆ 4.ಇಲಿ ಬೇಟೆ 5.ಅಳಿಲು ಬೇಟೆ 6.ಕಾಡು ಬೆಕ್ಕಿನ ಬೇಟೆ 7.ದೊಣ್ಣೆಕಾಟ ಓತಿಕ್ಯಾತನ ಬೇಟೆ 8.ಗುಬ್ಬಿ ಬೇಟೆ 9.ಜೇನಿನ ಬೇಟೆ 10.ಮೀನು ಬೇಟೆ 11.ನವಿಲು ಬೇಟೆ 12.ಹಂದಿ ಬೇಟೆ 13. ಹೊಲಮೇರಿ ಬೇಟೆ ಎಂದು ಹೆಸರಿಸಬಹುದು. ಇವುಗಳಲ್ಲದೆ, ಸಸ್ಯಹಾರಿ ಬೇಟೆಯಲ್ಲಿ ಅಣಬೆ ಬೇಟೆ ಪ್ರಮುಖವಾಗಿದೆ. ಹೀಗೆ ಆಹಾರ ಸಂಗ್ರಹಣೆ ಅಲೆಸೊಪ್ಪು, ಮೀನಿಗೊಂದಿ ಸೊಪ್ಪು ಪೌಷ್ಠಿಕ ಆಹಾರದಾಗಿತ್ತು. ಇಂದು ಇವು ಮರೆಯಾಗಿವೆ. ಬೇಡರು 1976 ರ ಸುಮಾರಿಗೆ ಬರಗಾಲ ಬಂದಾಗ ಅಲೆಸೊಪ್ಪು, ಕೆಂಪುಜೋಳ, ತಿಂದು ಬದುಕಿದೆವು ಎನ್ನುತ್ತಾರೆ. ಇಂದು ಬೇಡನಾಯಕರು ರೂಢಿಸಿಕೊಂಡ ಬೇಟೆಯನ್ನು ಈ ಕೆಳಕಂಡಂತೆ ವಿವರಿಸಲಾಗುವುದು.

**ಉಡದ ಬೇಟೆ:**

ಅತೀಚಾಣಾಕ್ಷತನದ ಬೇಟೆ ವಿಧಾನ ಇದಾಗಿದ್ದು, ದಟ್ಟಕಾಡು, ಸರೋವರ, ದೊಡ್ಡಗಾತ್ರದ ಸೇತುವೆ, ಕೆರೆ, ಕಟ್ಟೆ, ಕೋಡಿಗಳಲ್ಲಿ ಉಡದ ಬೇಟೆಯನ್ನಾಡುತ್ತಾರೆ. ಉಡದ ಬೇಟೆಯಾಡುವುದು ಹೆಚ್ಚಾಗಿ ಬಿಸಿಲಿನಲ್ಲಿ ವಿಶೇಷವಾಗಿ ಮಳೆ ಬಂದಾಗ ಮಾತ್ರ ಉಡ ಹಸಿಮಣ್ಣು, ಕೀಟಗಳನ್ನು ತಿನ್ನಲು ಹೊರಬರುತ್ತದೆ. ಬೇಡರಿಗೆ ಇದು ಸಿಕ್ಕಿದರೆ ಮನೆಯಲ್ಲಿ ಹಬ್ಬದ ವಾತಾವರಣವೇ ಸರಿ. ಶಿವಾಜಿ ಮೊದಲಾದ ರಾಜರು ಅನೇಕ ಕೋಟೆಕೊತ್ತಲೆಗಳನ್ನು ತನ್ನ ವಶಕೆ ತೆಗೆದುಕೊಂಡಿರುವುದು ಇಂಥ ಪ್ರಾಣಿಯಿಂದಲೇ (ಘೋರ್ಪಡೆ) ಎಂಬ ಹೇಳಿಕೆಗಳಿವೆ. ಇತರರು ಆಕಸ್ಮಿಕವಾಗಿ ಈ ಬೇಟೆಯನ್ನಾಡುತ್ತಾರೆ. ಸೊಂಡರೂ ಸಂಸ್ಥಾನದ ರಾಜರೆಂದು ತಮ್ಮನ್ನು ಕರೆದುಕೊಂಡಿದ್ದಾರೆ. ಹೀಗೆಂದರೆ ಕನ್ನಡದಲ್ಲಿ ಉಡ ಎಂದರ್ಥ. ತಿಂಗಳಿಗೊಮ್ಮೆಯಾದರೂ ಬೇಡರು ಈ ಬೇಟೆಗೆ ಹೋಗುತ್ತಾರೆ. ಇದನ್ನು ಕೇವಲ ಆಹಾರಕ್ಕಾಗಿಯೇ ಅಷ್ಟೇ ಅಲ್ಲ ಆಯುರ್ವೇದ ಔಷಧಿಯನ್ನು ಇದರಿಂದ ಉತ್ಪಾದಿಸುತ್ತಾರೆ. ಇದರ ತಲೆ ಮತ್ತು ಬಾಲಗಳು ವಿಷ ಎಂದು ತಿನ್ನುವುದಿಲ್ಲ. ಇದರ ತುಪ್ಪವನ್ನು ಕಾಲುನೋವಿಗೆ ಇತ್ಯಾದಿ ವ್ಯಾಧಿಗಳಿಗೆ ಬಳಸುತ್ತಾರೆ. ಇದರ ತುಪ್ಪದಲ್ಲಿ ಅರಿಸಿಣ ಈರುಳ್ಳಿ ಬೆರಸಿದರೆ ಸುಮಾರು ವರ್ಷಗಳವರೆಗೆ ಅದರ ಸ್ವಾದ ಬಿಟ್ಟುಬಿಟ್ಟು ಕೊಡುವುದಿಲ್ಲ. ಉಡದ ಬಾಲದಿಂದ ಏಟು ತಿಂದವರೆ ಬಹಳ ಮಂದಿ, ಯಾವುದಾದರೂ ಕುಣೆ, ರಂಧ್ರ ಇಲಿಬೋನಿನೊಳಗೆ ಸೇರಿಕೊಂಡಾಗ ಇದು ಅಷ್ಟು

ಸುಲಭವಾಗಿ ಸಿಗುವುದಿಲ್ಲ. ಮುಟ್ಟಿದರೆ ಬಾಲದಿಂದ ಬಾರಿಸುತ್ತದೆ. ಬಾಯಿಂದ ಕಚ್ಚುತ್ತದೆ, ಉಡವನ್ನು ಬೇಟೆಗಾರನಿಗಿಂತ ಮೊದಲು ನಾಯಿಗಳು ಕಂಡುಹಿಡಿಯುವುದು ಹೆಚ್ಚು. ಇತ್ತೀಚೆಗೆ ಬಂಡೆ ಸೊರಿಕೆಗಳಲ್ಲಿ ಸಿಕ್ಕ ಪ್ರಕರಣಗಳೇ ಜಾಸ್ತಿ. ಮಧ್ಯ ಕರ್ನಾಟಕದಲ್ಲಿ ಈ ಬೇಟೆ ಹೆಚ್ಚು ಪ್ರಚಲಿತದಲ್ಲಿದೆ. ಬೇಡರು ಈ ಬೇಟೆಯಲ್ಲಿ ನಿಸ್ಸೀಮರು.

**ಚಿಗರೆ (ಜಿಂಕೆ) ಬೇಟೆ:**

ಚಿಗರೆ ಬೇಟೆ ಕರ್ನಾಟಕದಲ್ಲಿ ಅತೀ ಹೆಚ್ಚು ಪ್ರಚಲಿತ. ಮಹತ್ವದಿಂದ ಕೂಡಿದೆ. ಬೇಡರಿಗೆ ಪ್ರತಿಷ್ಠಿತ ಬೇಟೆ ಇದಾಗಿದ್ದು, ಇತರ ಎಲ್ಲಾ ವರ್ಗದವರು ಬೇಟೆಯಾಡಿದಗೂ ಬೇಡರು ಚಿಗರೆಗೆ ಸಿಂಹ ಸ್ವಪ್ನವಾಗಿರುತ್ತಾರೆ. ಚಿಗರೆ ಅಥವ ಜಿಂಕೆಯನ್ನು ಕೊಂದ ವ್ಯಕ್ತಿಗೆ ಅಡ್ಡ ಹೆಸರು ಚಿಗರೆಬೋರ (ಜಿಂಕಲುಬೋರ) ಚಿಗರೆವಾರು (ಜಿಂಕೆವಾರು) ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಚಿಗರೆ ಹೆಚ್ಚಾಗಿ ದಟ್ಟವಾದ ಅರಣ್ಯದಲ್ಲಿ ಪ್ರಚಲಿತದಲ್ಲಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಮಲ್ಲೂರಹಳ್ಳಿ ಪಿಲ್ಲಗೂಂಡ್ಲು ಅರಣ್ಯ ಮತ್ತು ಮೊಳಕಾಲ್ಮೂರು ಬಳಿಯಿರುವ ಕಮರಕಾವಲಿನಲ್ಲಿ ಚಿಗರೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇಲ್ಲಿ 1984 ರಿಂದ 2000 ರ ವರೆಗೆ ಸಾಕಷ್ಟು ಚಿಗರೆಗಳನ್ನು ಕಳ್ಳತನದಿಂದ ಬೇಟೆಯಾಡುವುದು ತಿಳಿದುಬರುತ್ತದೆ. ಇವುಗಳಿಗೆ ಬಲೆಯನ್ನು ಸಹ ಹಾಕುತ್ತಾರೆ. ಮತ್ತು ಆಧುನಿಕವಾಗಿ ಬಂದೂಕಿನಿಂದಲೇ ಹೆಚ್ಚಾಗಿ ಸಾಯಿಸುತ್ತಾರೆ. ಜಿಂಕೆಗಳು ಕೋಡುಗಳನ್ನು ಪ್ರತಿಷ್ಠೆಗಾಗಿ ಬೇಡರ ಮನೆಯಲ್ಲಿ ನೋಡಲು ಚೆಂದಕ್ಕಾಗಿ ಬಾಗಿಲಿನ ಮೇಲೆ ಮತ್ತು ಜಿಂಕೆಗಳ ಅಕ್ಕ-ಪಕ್ಕದಲ್ಲಿ ಇಟ್ಟಿರುತ್ತಾರೆ. ಬೇಡರು ಜಿಂಕೆಮರಿಗಳನ್ನು ಸಾಕಿದರೂ ಒಂದಲ್ಲ ಒಂದು ದಿನ ಸಾಯಿಸಿ ತಿನ್ನುತ್ತಾರೆ. ಬೇಡರೆ ಅಲ್ಲದೇ ಕರ್ನಾಟಕದ ಇತರ ಸಮುದಾಯಗಳಲ್ಲಿಯೂ ಈ ಬೇಟೆಯನ್ನು ನೋಡಬಹುದು. ಮೊಳಕಾಲ್ಮೂರುವಿನಲ್ಲಿ ಜಿಂಕೆಯನ್ನು ಸಾಕಿದ ಪದ್ಮಶಾಲಿ ಕುಟುಂಬಕ್ಕೆ ಜಿಂಕಾ ಎಂದು ಕರೆಯುತ್ತಾರೆ. (ಜೆ.ಆರ್. ರಾಮಮೂರ್ತಿ) ಚಿತ್ರದುರ್ಗದ ಬೇಡ-ನಾಯಕರ ಪೈಕಿ ಒಬ್ಬ ಅಧಿಕಾರಿ ಹೆಸರು ಜಿಂಕಾಲಪ್ಪ ಎಂದಿದೆ.

**ಮೊಲದ ಬೇಟೆ:**

ಸಾಹಸ ಮತ್ತು ಸೂಕ್ಷ್ಮ ತರಹವಾದುದು ಮೊಲದ ಬೇಟೆ ಮೊಲ ಚುರುಕಾದ, ಜಾಣ್ಮೆಯುಳ್ಳ ಪ್ರಾಣಿ ಪ್ರಾಚೀನ ಕಾಲದಿಂದಲೂ ಮೊಲದ ಬೇಟೆ ಎಂಬುದು ಬೇಟೆಯ ಒಂದು ವಿಧಾನವಾಗಿ ಪ್ರಚಲಿತದಲ್ಲಿದೆ. ಮೊಲದ ಆಹಾರ ಎಳೆಯ ಹುಲ್ಲು ಚೊಬ್ಬು, ಗರಿಕೆ, ಇದು ನೀರು ಕುಡಿಯುವುದಿಲ್ಲವೆಂದು ಹೇಳಲಾಗಿದೆ. ಮೊಲ ಊರಲ್ಲಿ ಬಂದರೆ ಅಪಶಕುನ, ಮೊಲವನ್ನು ಹಿಡಿದು ತರಬಾರದು, ಊರಿಗೆ ಕೆಟ್ಟದಾಗುತ್ತದೆ ಎಂಬ ನಂಬಿಕೆಯಿದೆ. ಮೊಲಗಳು ಹೆಚ್ಚಾಗಿ ದೊಡ್ಡ ಚಿಕ್ಕ ಪೊದೆಗಳಲ್ಲಿ ವಾಸಿಸುತ್ತವೆ. ಕುರಿಗಳು ಮೇಯುವ ಜಾಗದಲ್ಲಿ ಇವು ಇರುತ್ತವೆ. ಅವುಗಳ ಕಾಲಿನ ಅಡಿಯಲ್ಲಿರುವಾಗ ಇನ್ನೊಂದೆಡೆಗೆ ಓಡುವುದಿಲ್ಲ, ಹೀಗಾಗಿ ಬೇಟೆಗೆ ಅನುಕೂಲವಾದ ಪರಿಸರ ಕಲ್ಪಿಸುತ್ತದೆ.

ಮೊಲವು ನಿಶಾಚಾರಿ ಪ್ರಾಣಿ, ಕತ್ತಲಲ್ಲಿ ಆಹಾರ ಹುಡುಕುವುದು ಹೆಚ್ಚು. ಹಾಗಾಗಿ ಬ್ಯಾಟರಿಯ ಬೆಳಕಿನ ಸಹಾಯದಿಂದ ಬೇಟೆಯಾಡುತ್ತಾರೆ. ಬ್ಯಾಟರಿಯನ್ನು ತಲೆಗೆ ಕಟ್ಟಿಕೊಂಡು ಅದರ ಬೆಳಕು ಮುಂದೆ ಬಿದ್ದಾಗ ಅದು ಕಿವಿ ನಿಗಿರುಸುತ್ತದೆ, ಕೂಡಲೇ ಬಂದೂಕಿನಿಂದ ಹೊಡೆದು ಇಲ್ಲವೇ ಹಿಂದಿನಿಂದ ಓಡಿಬಂದು

ಕೋಲಿನಿಂದ ಹೊಡೆದು ಸಾಯಿಸುತ್ತಾರೆ. ಮೊಲವನ್ನು ಕೈಯಿಂದ ಹಿಡಿಯುವುದೇ ಹೆಚ್ಚು ವಿನ್ನಹಗರಿ ನದಿ ಪರಿಸರದಲ್ಲಿ ಮೊಲದ ಬೇಟೆ ಹೆಚ್ಚು ಪ್ರಚಲಿತದಲ್ಲಿತ್ತು. ಇದು ಕಾಡು ಮತ್ತು ಹುಲ್ಲುಗಾವಲು ಪ್ರದೇಶ ನಾನಾ ರೀತಿಯ ಮಾನವ ಉಪಯೋಗಕ್ಕೆ ಬಳಕೆಯಾಗುವುದರಿಂದ ಮೊಲಗಳ ಸಂತತಿ ಇಳಿಮುಖವಾಗುತ್ತಿದೆ.

**ಇಲಿ ಬೇಟೆ:**

ಮೂರು ಅಥವ ನಾಲ್ಕು ಜನ ಸೇರಿ ಮಧ್ಯಾಹ್ನದ ಸಮಯದಲ್ಲಿ ನೆಲದೊಳಗಿನ ಬೋನುಗಳನ್ನು ಕೋಲು ಅರೆಕೋಲು, ಚಲಕಿ, ಗುದ್ದಲಿಯಿಂದ ಅಗೆದು ರಂದ್ರಗಳಿಗೆ ಹೊರೆಹಾಕಿ ಬೇಟೆಯಾಡುತ್ತಾರೆ. ಇಲಿಯೆಂದರೆ ಇಲ್ಲಿ ಅಡವಿ ಅಥವ ಕೆಂಪು ಇಲಿ ಎಂದರ್ಥ, ದಪ್ಪ ಉದ್ದವಿದ್ದು ನೋಡಲು ತುಂಬಾ ಸುಂದರವಾಗಿರುತ್ತದೆ. ಮಳೆಬಂದ ಮರುದಿನ ಈ ಬೇಟೆ ಫಲಕಾರಿಯಾಗುತ್ತದೆ. ಬೇಡರು ಗುಂಪು–ಗುಂಪಾಗಿ ಈ ಬೇಟೆಗೆ ಹೋಗುತ್ತಾರೆ. ಚಿಕ್ಕಮಕ್ಕಳಿಂದ ಹಿಡಿದು ವೃದ್ಧರವರೆಗೂ ಅತೀ ಸರಳವಾಗಿ ಈ ಬೇಟೆಯನ್ನಾಡುವುದುಂಟು. ಇಲ್ಲಿ ಬೋನಿನಲ್ಲಿ ಹೆಜ್ಜೆ ಗುರುತುಗಳನ್ನು ಗುರುತಿಸಿ, ವಾಸನೆ ಹಿಡಿದು ಕೋಲುಗಳ ಮೂಲಕ ಶಬ್ಧಮಾಡಿ ಇಲಿಯನ್ನು ಸುಟ್ಟುಕೊಂಡು ತಿನ್ನುತ್ತಾರೆ. ಇಲಿ ಬೋನಿನಲ್ಲಿ ಹಾವಿರುವ ಸಾಧ್ಯತೆಯಿದ್ದು ಈ ಬೇಟೆಯಲ್ಲಿ ಅನಾಹುತಗಳು ಸಂಭವಿಸಬಹುದು, ತೆಲುಗಿನಲ್ಲಿ ಬೇಡರು ಈ ಬೇಟೆಯನ್ನು ಕುಂದಲಿಯಾಟ ಎನ್ನುತ್ತಾರೆ. ಮೊಲದ ಬೇಟೆಗಾರರಿಗೆ ಕುಂದಲಾಡು, ಕುಂದಲಯ್ಯ ಕುಂದರ್ಲಪ್ಪ ಕುಂದುರ್ಲು ಮನೆಯವರೆಂದು ಗುರತಿಸಿ ಕರೆಯುತ್ತಾರೆ.

**ಅಳಿಲು ಬೇಟೆ:**

ಅಳಿಲು ಬೇಟೆಯನ್ನು ಹೆಚ್ಚಾಗಿ ಊರಿನ ಅಕ್ಕಪಕ್ಕದಲ್ಲಿ ಆಡುತ್ತಾರೆ. ಕೊರಚಲು ದಾಸರು ಜೋಗಪ್ಪ ಅರೆಬುಡಬುಡುಕೆ, ಕುರುಮಾಯ ಮುಂತಾದವರು ಅಳಿಲನ್ನು ತಿನ್ನುತ್ತಾರೆ. ಬೇಡರು ಅಳಿಲಿಗೆ ಪೂಜನೀಯ ಸ್ಥಾನ ಕೊಟ್ಟಿದ್ದಾರೆ. ಇದು ಶ್ರೀರಾಮಚಂದ್ರನಿಗೆ ಸಹಕರಿಸಿದುದರಿಂದಲೇ ಇದರ ಬೆನ್ನಿನ ಮೇಲೆ 3 ನಾಮಗಳಿವೆ ಎನ್ನುತ್ತಾರೆ, ಕೆಮ್ಮು ಜಾಸ್ತಿ ಇದ್ದವರು ರೋಗಿಗಳು ಈ ಅಳಿಲಿನ ಮಾಂಸ ತಿಂದರೆ ರೋಗ ವಾಸಿಯಾಗುತ್ತೆಂಬ ನಂಬಿಕೆ ಇದೆ. ಈ ಮೊದಲೇ ತಿಳಿಸಿದಂತೆ ಸೋಲಿಗರು ಈ ಬೇಟೆಯಲ್ಲಿ ನಿಸ್ಸೀಮರು, ಊರೂರು ತಿರುಗುವ 'ಜಂಗಾಲಿ' ಎನ್ನುವ ಸಮುದಾಯದವರು ತಮ್ಮ ಅಲೆದಾಟದ ಜೀವನದಲ್ಲಿ ಈ ಅಳಿಲು ಬೇಟೆಯನ್ನು ಉಳಿಸಿಕೊಂಡು ಬಂದಿದ್ದಾರೆ.

**ಕಾಡು ಬೆಕ್ಕಿನ ಬೇಟೆ:**

ಬೆಕ್ಕುಗಳಲ್ಲಿ ಎರಡು ವಿಧ. ಒಂದು ಊರು ಬೆಕ್ಕು ಎರಡನೆಯದು ಕಾಡು ಬೆಕ್ಕು. ಇದು ಊರು ಬೆಕ್ಕಿಗಿಂತ ಆಕಾರ, ಗಾತ್ರದಲ್ಲಿ ದೊಡ್ಡದಾಗಿರುತ್ತದೆ. ಹೋಲಿಕೆಯಲ್ಲಿ ಇದು ಮೊಲದ ಬೇಟೆಯನ್ನು ಹೋಲುತ್ತದೆ. ಒಲೆ ಇಲ್ಲವೇ ಮರಹತ್ತಿ ಹೊಡಿಯುತ್ತಾರೆ. ಕೆಲವೊಂದು ಹಿಂದುಳಿದ ಸಮುದಾಯದವರು ಮಾತ್ರ ಇದನ್ನು ಬೇಟೆಯಾಡುತ್ತಿದ್ದು, ಅವರಲ್ಲಿ ಬೇಡರು ಸಾಹಸದಿಂದ ಗುಡ್ಡ ಬೆಟ್ಟ ಅಲೆದಾಡಿ ಹಿಡಿಯುತ್ತಾರೆ. ಊರು ಬೆಕ್ಕು ಸೇವೆನೆಗೆ ನಿಷಿದ್ದವಾದರೂ ಕೆಲವರು ಸೇವಿಸುತ್ತಾರೆ. ಬೇಡರು ಈ ಕಾಡುಬೆಕ್ಕನ್ನು ತಿನ್ನುತ್ತಾರೆ. ಹದ್ದು, ಕರಡಿ, ಮುಳ್ಳುಹಂದಿಗಳ ಬೇಟೆಯೂ ಇದರಂತೆ ಹಗಲಿನಲ್ಲಿ ನಡೆಯುತ್ತದೆ.

**ದೊಣ್ಣೆ ಕಾಟ್ ಬೇಟೆ:** ಓತಿಕ್ಯಾತ ಅಥವ ದೊಣ್ಣೆಕಾಟವನ್ನು ಬೇಡ ಸಮುದಾಯದ ಮಕ್ಕಳು ಬೇಟೆಯಾಡುತ್ತಾರೆ. ಮಳೆಗಾಲದಲ್ಲಿ ಅದನ್ನು ತಂದು ಮೆರವಣಿಗೆ ಮಾಡುವುದು ಬಾಲ ಕ್ರೀಡೆಗಳಲ್ಲೊಂದು. ಅದು ತಲೆ ಅಲ್ಲಾಡಿಸಿದ ಕೂಡಲೆ ಬಡಿಯುವುದು ಇದನ್ನು ಮಕ್ಕಳು ಮಾತ್ರ ಬೇಟೆಯಾಡುತ್ತಾರೆ ವಿನಾ ತಿನ್ನುವುದಿಲ್ಲ. ಬೆಕ್ಕು ಅಥವ ಹದ್ದುಗಳಿಗೆ ಸುಲಭವಾಗಿ ಸಿಗುವ ಆಹಾರವಾಗಿದೆ. ಕೋನೆ ರೋಗದಿಂದ ಬೆಳವಣಿಗೆ ಕುಂಟಿತಗೊಂಡ ಮಕ್ಕಳಿಗೆ, ಓತಿಕ್ಯಾತವನ್ನು ಸುಟ್ಟು ಅದರ ಮಾಂಸವನ್ನು ತಿನ್ನಿಸುವುದರಿಂದ ಸುಧಾರಣೆಯಾಗುತ್ತೆಂಬ ನಂಬಿಕೆಯಿದೆ. ದೊಣ್ಣೆಕಾಟ ತಲೆ ಅಲ್ಲಾಡಿಸಿದ್ದರಿಂದ ಬಂಡೆ ಮಗ್ಗುಲಲ್ಲಿ ಅಡಗಿದ್ದವರು ಸಿಕ್ಕರೆಂಬ ಕಾರಣಕ್ಕೆ ಭಾರತದ ಮುಸ್ಲಿಮರು ಹಿಂದೂಗಳ ವಿರುದ್ದ ಸೇಡು ತೀರಿಸಿಕೊಳ್ಳಲು ಇದನ್ನು ಹೊಡೆದು ಸಾಯಿಸುತ್ತಾರೆ.

**ಗುಬ್ಬಿ ಬೇಟೆ:**

ಇದು ಸಾಕಷ್ಟು ಪ್ರಚಲಿತದಲ್ಲಿರುವ ಬೇಟೆ ವಿಧಾನ, ಪಳಕಿ, ಕೌಜುಗ, ಬೆಳವ, ಟ್ರಿವುಕ ಮುಂತಾದ ಪಕ್ಷಿಗಳನ್ನು ಬೇಟೆಯಾಡುತ್ತಾರೆ. ಕೌಜುಗ ಬೇಟೆ, ಪೌಜಿ, ಉರುವಲು, 'ಬಡಗುಬಂಡೆ' ಮುಂತಾದ ಪರಿಕರಗಳಿಂದ ಪಕ್ಷಿಗಳನ್ನು ಹಿಡಿಯುತ್ತಾರೆ. ಇತ್ತೀಚಿಗೆ ಕವಣಿ ಬಳಸುತ್ತಾರೆ. ಕೋವಿನಿಂದಲೂ ಬೇಟೆ ಸಾಗುತ್ತಲಿದೆ. ಸಣ್ಣ ಬಲೆಗಳನ್ನು ಹಾಕಿ ಪಕ್ಕದಲ್ಲಿ ಸಾಕಿದ ಕೌಜಗಳನ್ನಾಡುವರು. ಅದರ ಧ್ವನಿ ಬಲೆಗೆ ಬೀಳುತ್ತವೆ. ಬಯಲು ಸೀಮೆಯಲ್ಲಿ ಬೇಡರು ಈ ವಿಧಾನವನ್ನು ಅನುಸರಿಸುತ್ತಾರೆ. ಗುಬ್ಬಿ ಬೇಟೆಗೆ ವಿಶೇಷವಾದ ಬಲವಾದ ಆಯುಧಗಳನ್ನು ಬಳಸಿದರೆ ನಗೆಪಾಟಲಾಗುತ್ತದೆ. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಎಂಬ ಗಾದೆ ಇದನ್ನು ಸಮರ್ಥಿಸುತ್ತದೆ.

ಬೆಳವ, ಎಂಬ ಪಕ್ಷಿಯು ತತ್ತಿಯ ಮೇಲೆ ಕುಳಿತಾಗ ಉಪಾಯದಿಂದ ಉರುಲಿನ ಮೂಲಕ ಹಿಡಿಯುತ್ತಾರೆ. 'ಪಳಕಿ' ಎನ್ನುವ ಪಕ್ಷಿಯನ್ನು ಸಹ ಅಷ್ಟ ಉರುಲು ಮುಂತಾದ ಸಲಕರಣೆಯಿಂದ ಬೇಟೆ ಆಡುತ್ತಾರೆ. ಹಕ್ಕಿ ಪಿಕ್ಕಿ ಜನಾಂಗದವರು ಇಂಥ ಬೇಟೆಯಲ್ಲಿ ಪ್ರವೀಣರು. ಕಲ್ಲಿನ ಏಟಿನಿಂದ ಗುಬ್ಬಿಗಳ ಬೇಟೆ ನಡೆಯುತ್ತದೆ.

**ಜೇನು ಬೇಟೆ:**

ಕರ್ನಾಟಕದಲ್ಲಿ ಅಪರೂಪವಾದುದು ಈ ಜೇನುಬೇಟೆ. ಯಾವುದೇ ತರಹದ ಬೇಟೆ ಎಲ್ಲೂ ಸಿಗದಿದ್ದರೆ ಬಳಲಿದ ಬೇಟೆಗಾರ ಅರಣ್ಯದ ತಂಪಾದ ಪ್ರದೇಶದಲ್ಲಿ ಜೇನನ್ನು ಹುಡುಕುವ ಹವ್ಯಾಸವನ್ನು ಬೆಳೆಸಿಕೊಂಡಿರುತ್ತಾನೆ. ಇದು ಬೇಡರು, ಸೋಲಿಗರು, ಕಾಡುಕುರುಬರು, ಜೇನುಕುರುಬರಿಗೆ ಒಂದು ಮುಖ್ಯವಾದ ವೃತ್ತಿಯಾಗಿದೆ. ಜೇನು ಎರಡು ಋತುಮಾನಗಳಾದ ಮೇ, ಜೂನ್, ತಿಂಗಳಿನಲ್ಲಿ ಒಂದು ಕೊಯ್ದಲು ಕೊಟ್ಟರೆ, ಅಕ್ಟೋಬರ್‌ನಿಂದ ನವೆಂಬರ್‌ವರೆಗೆ ಮತ್ತೊಂದು ಕೊಯ್ಲು ಸಿಗುತ್ತದೆ. ಇವುಗಳ್ನು ಯಥೇಚ್ಛವಾಗಿ ತಿನ್ನುವವರು ಸೋಲಿಗರು ಮತ್ತು ಜೇನುಕುರುಬರು. ನಿರ್ಬಂಧವಿಲ್ಲದ ಕಾರಣ ಜೇನಿನ ಬೇಟೆಗೆ ಇಂದು ಗುಂಪುಗುಂಪಾಗಿ ಹೋಗುತ್ತಾರೆ. ಸಾಮೂಹಿಕವಾಗಿ ಕಂಡುಹಿಡಿದ ಜೇನನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ, ದೊಡ್ಡಗಾತ್ರದ ಜೇನುಗಳಿದ್ದರೆ ಅದರ ಅಡಿಯಲ್ಲಿ ಬೆಂಕಿ ಹಾಕಿ ಹೊಗೆ ಎಬ್ಬಿಸಿ. ಆ ಹೊಗೆಯಿಂದ ಜೇನುಹುಳುಗಳು ದೊರದಲ್ಲಿ ಎದ್ದು ಹೋಗುವಂತೆ ಮಾಡುತ್ತಾರೆ. ಹುಳುಗಳು ಹಾರಿಹೋದ

ಮೇಲೆ ಮರ ಹತ್ತಿ ಜೇನಿನ ಹುಟ್ಟಿಯನ್ನು ಕುಯ್ದು ಬುಟ್ಟಿಯೊಳಕ್ಕೆ ತುಂಬಿ ಕೆಳಗೆ ಬರುವರು, ಮರದ ಕೆಳಗೆ ಇರುವ ವ್ಯಕ್ತಿಗಳು ಬುಟ್ಟಿಯಿಂದ ಜೇನನ್ನು ತೆಗೆದು ಪಾತ್ರಗಳಿಗೆ/ಸೀಸಗಳಿಗೆ ತುಂಬುವರು. ಜೇನಿರುವ ಮರವನ್ನು ಏರುವಾಗ ಪಂಜನ್ನು ಹಿಡಿದು ಜೇನಿನಗೂಡಿಗೆ ತಾಗಿಸಿದರೆ. ಹುಳುಗಳು ಬೆಂಕಿಗೆ ಸಿಕ್ಕಿ ಸತ್ತು ಕೆಳಗೆ ಉರುಳುವವು.

**ಮೀನುಬೇಟೆ:**

ಆದಿ ಕಾಲದಿಂದಲೂ ಸರಳವಾದ ಬೇಟೆ ಎನಿಸಿದ್ದು ಮೀನುಬೇಟೆ. ಮೀನನ್ನು ಹೆಚ್ಚಾಗಿ ಕೆರೆ, ಕಟ್ಟೆ, ನದಿ, ಕಾಲುವೆ, ಹಳ್ಳ ಕೊಳ್ಳ ಮತ್ತು ಬಾವಿಗಳಲ್ಲಿ ಬೇಟೆಯಾಡುತ್ತಾರೆ. ಮೀನುಗಳು ಮೊಟ್ಟೆ ಮತ್ತು ಮರಿ ಹಾಕುವುದನ್ನು ತಿಳಿಸುತ್ತಾರೆ. ಇವುಗಳನ್ನು ಹಿಡಿಯಲು ಬಲೆ, ಗಾಳ, ಕೊಳೆ ಮುಂತಾದ ಸಲಕರಣೆಗಳನ್ನು ಉಪಯೋಗಿಸುತ್ತಾರೆ. ಒಲೆಯಲ್ಲಿ ಎರಡು ವಿಧ: ಒಂದು ದೊಡ್ಡ ಬಲೆ ಎರಡುಕಡೆಗೆ ದೊಡ್ಡ ಕೋಲುಗಳನ್ನು ಕಟ್ಟಿ, ಅರ್ಧಚಂದ್ರ ಕಾರದ ಬಲೆಯನ್ನು ಮಾಡಿ ಹಿಡಿಯುತ್ತಾರೆ. ಒಂದು ಕಡೆಯಿಂದ ಇನ್ನೊಂದೆಡೆಗೆ ಶೋಧನೆ ನಡೆಯುತ್ತದೆ. ಇಬ್ಬರು ಬಲೆ ಹಿಡಿದುಕೊಂಡರೆ ನಾಲ್ಕಾರು ಮಂದಿ ಮಡುವಿನಿಂದ ಸಪ್ಪಳ ಮಾಡಿಕೊಂಡು ಬಂದು ಒಂದೇ ಸಾರಿ ಎಲ್ಲರೂ ಬಲೆಯನ್ನು ಮೇಲಕ್ಕೆ ಎತ್ತುತ್ತಾರೆ. ಬಲೆ ಎತ್ತಿದಾಗ ಬಿದ್ದ ಮೀನನ್ನು ಒಬ್ಬ ವ್ಯಕ್ತಿ ಇಟ್ಟುಕೊಳ್ಳುತ್ತಾನೆ. ಇದರಲ್ಲಿ ಸಣ್ಣ–ಪುಟ್ಟ ಮೀನಿನಿಂದ ದೊಡ್ಡ ಗಾತ್ರದ ಮೀನಿನವರೆಗೆ ಬೀಳುತ್ತವೆ.

**ನವಿಲು ಬೇಟೆ:**

ಆದಿವಾಸಿಗಳಲ್ಲದೆ ಇತರರು ನವಿಲನ್ನು ಬೇಟೆಯಾಡುತ್ತಿದ್ದರು. ಮಲೆನಾಡಿನ ಶಿವಮೊಗ್ಗ ಚಿಕ್ಕಮಗಳೂರು ಮೊದಲಾದ ಜಿಲೆಗಳಲ್ಲಿ ಈ ಬೇಟೆ ವ್ಯಾಪಕವಾಗಿದೆ. ಬಯಲುಸೀಮೆಯಲ್ಲಿ ಅಪರೂಪವಾಗಿ ಕಾಣಿಸಿಕೊಳ್ಳುವ ನವಿಲನ್ನು ಬೇಟೆಯಾಡುವುದು ಕಡಿಮೆ ಎನ್ನಬೇಕು. ಬೇಡರು ಇದನ್ನು ಬೇಟೆಯಾಡುವುದಿಲ್ಲ. ನವಿಲು ಬೇಡರಿಗೆ ಪವಿತ್ರ ಪಕ್ಷಿಯಾಗಿದ್ದರೂ ಇಂದು ಕೆಲವರು ಬಳ್ಳಾರಿ ದಾವಣಗೆರೆ ಭಾಗಗಳಲ್ಲಿ ಬೇಟೆಯಾಡುತ್ತಾರೆ.

**ಹಂದಿ ಬೇಟೆ:**

ಇದನ್ನು ಯುಗಾದಿ ಅಮಾವಾಸ್ಯೆ ಬೇಟೆಯಂತಲೇ ಕರೆಯುವರು ಹಿಂದಿನಿಂದಲೂ ಇಂದು ಖ್ಯಾತಿ ಪಡೆದು ಪ್ರಚಲಿತದಲ್ಲಿದೆ. ಲಕ್ಷ್ಮೀ ಸ್ವರೂಪ ಸಮೃದ್ಧಿ ಸಂಕೇತವೆಂದು ಹಂದಿ ಬಗ್ಗೆ ನಂಬಿಕೆಯಿದೆ. ಅದ್ದರಿಂದ ಕೆಲವು ಬೇಡರು ಹಂದಿಯನ್ನು ತಿನ್ನುವುದಿಲ್ಲ. ಇತ್ತೀಚೆಗೆ ಯುಗಾದಿ ಬೇಟೆಯನ್ನು ನೋಡಿದರೆ ಅದು ಕೇವಲ ಒಂದು ವರ್ಗಕ್ಕೆ ಮಾತ್ರ ಸೀಮಿತವಾದಂತಿದೆ. ಅಂಥದರಲ್ಲಿ ಬೇಡರು ಪ್ರಮುಖರು. ಯುಗಾದಿಯ ಅಮಾವಾಸ್ಯೆಯ ದಿನ ಗ್ರಾಮದವರೆಲ್ಲರೂ ಸೇರಿ ಕಾಡಿಗೆ ಹಂದಿಬೇಟೆಗೆಂದು ಹೋಗುವುದಕ್ಕೆ ಒಂದು ವಾರ ಮೊದಲಲೇ ಗೊತ್ತು ಪಡಿಸುತ್ತಾರೆ. ಆಯಾ ಗ್ರಾಮದ ಮುಖ್ಯಸ್ಥರು ಮತ್ತು ಬೇಟೆ ಗುರಿಕಾರನು ಬೇಟೆಗೆ ಹೋಗಬೇಕೆಂದು ಸಮಾಲೋಚನೆ ನಡೆಸಿ ಒಂದುವಾರ ಮೊದಲೇ ನಿರ್ಧರಿಸುತ್ತಾರೆ. ಅನಂತರ ಊರಿನ ಹರಿಜನ ವ್ಯಕ್ತಿ ತಮಟೆ ಬಾರಿಸುತ್ತಾ ವಿಷಯದ ಡಂಗೂರ ಸಾರುತ್ತಾನೆ, ಹೀಗೆ ಸಾರುವುದು ವಿಷಯವಾದ

ಪ್ರತಿಯೊಬ್ಬರಿಗೂ ಬೇಟೆಯ ವಿಷಯ ತಿಳಿಯಲಿ. ಮೈನವಿರೇಳಿ ಬಹಳಷ್ಟು ಮಂದಿ ಬೇಟೆಗೆ ಬರಲಿ ಎನ್ನುವ ಉತ್ಸುಕತೆಯಿಂದ ತಮಟೆ ಬಾರಿಸುವವನು, ಊರಿನ ಬುಟ್ಟೆಕಲ್ಲಿನಿಂದ ಆರಂಭಿಸಿ ಊರೆಲ್ಲಾ ಸುತ್ತಿಕೊಂಡು ಬರುತ್ತಾನೆ. ಅವನಿಗೆ ಅಂದು ಊರಿನ ಯಜಮಾನರ ಮನೆಯಲ್ಲಿ ಊಟ ಹಾಕಿಸುತ್ತಾರೆ. ಯುಗಾದಿಯ ಅಮಾವಾಸ್ಯೆ ದಿನ ಮ್ಯಾಸಬೇಡರಲ್ಲಿ ಸೇರಿ ಸಕಲ ಆಯುಧಭರಿತರಾಗಿ ಊರಿನ ಎಲ್ಲಾ ದೇವರಿಗೆ ಕೈಮುಗಿದು ಸಾರುವವನ ಹಿಂದೆ ಸಾಲಿನೊಂದಿಗೆ ಹೋಗುವರು. ಮೊದಲು ಅಕ್ಕಪಕ್ಕದ ತಮ್ಮ ಕಾಡಿನಲ್ಲಿ ಬೇಟೆ ಯಾಡುತ್ತಾರೆ. ಅನಂತರ ಬೇಟೆ ಕಾಣಿಸಲಿಲ್ಲವೆಂದರೆ ಬೇಧಿಸಿಕೊಂಡು ಗಡಿ ಪ್ರಾಂತ್ಯ ಮೀರಿ ಹೋಗುವ ಸಾಧ್ಯತೆಯಿದೆ. ಅಲ್ಲಿ ಸಿಕ್ಕಂತಹ ಹಂದಿಯನ್ನು ತರುವಾಗ ಆ ಊರಿನ ಜನಕ್ಕೂ ಇವರಿಗೂ ಘರ್ಷಣೆಗಳಾಗುವುದುಂಟು. ಕಡಿದ ಹಂದಿಯನ್ನು ಕೂಡ ಅವರು ಕಸಿದುಕೊಳ್ಳಬಹುದು. (ಹಂದಿ ಬೇಟೆಯಲ್ಲಿ ದೊಡ್ಡ ವ್ಯಾಜ್ಯವಾದ ಬಗೆಗೆ ಹುಟ್ಟಿಕೊಂಡ ಜನಪದ ಗೀತೆಯನ್ನು ಅನುಬಂಧದಲ್ಲಿ ಕೊಡಲಾಗಿದೆ) ಹೀಗಾಗಿ ಸಂಘರ್ಷಗಳಿಂದ ಕಟ್ಟೆಮನೆ, ಗ್ರಾಮ ಪಂಚಾಯಿತಿ, ಪೊಲೀಸ್ ಠಾಣೆ, ಕೋರ್ಟ್ ಕಛೇರಿಗಳೆಂದು ಅಲೆದಾಡುವುದುಂಟು ತೀರ್ಪು ಸಿಗದೆ ಹಗೆತನವನ್ನು ಕೊನೆಯವರೆಗೂ ವಿವಿಧ ರೀತಿಯಲ್ಲಿ ತೀರಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

**ಅಡಿಟಿಪ್ಪಣಿ**

1. ಡಾ. ವಿರುಪಾಕ್ಷ ಪೂಜಾರಹಳ್ಳಿ(ಸಂ) – 'ಬೇಟೆ ಮತ್ತು ಬೇಡರು' ಪು. 274.
2. ಡಾ. ವಿರುಪಾಕ್ಷಿ ಪೂಜಾರಹಳ್ಳಿ(ಸಂ) – 'ಬೇಟೆ ಮತ್ತು ಬೇಡರು' ಪು. 281.
3. ಸಂಕ್ಷಿಪ್ತ ಕನ್ನಡ ನಿಘಂಟು, ಪು. 725.
4. ಸಂದರ್ಶನ: ಪುಟ್ಟಣ್ಣ, ಮಾದೇಶ್ವರ ಬೆಟ್ಟ.
5. ಡಾ. ಸಿದ್ಧಲಿಂಗಯ್ಯ, 'ಗ್ರಾಮದೇವತೆಗಳು', ಪು. 93.
6. ಡಾ. ಕೆ.ಆರ್. ಸಂಧ್ಯಾರೆಡ್ಡಿ, 'ಜಾಣಪದ ಪರಿಶೀಲನೆ', ಪು. 116.
7. ಡಾ. ಎಸ್.ಪಿ. ಪದ್ಮ ಪ್ರಸಾದ್, 'ಮಳೆ ಒಂದು ಜಾನಪದೀಯ ಅಧ್ಯಯನ', ಪು. 13.